# ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಶಾಹಾಪೂರ
## ಸಿ.ಸಿ ನಂಃ 672/ 2020

| | | |
|---|---|---|
| ಸಾಕ್ಷಿಯ ಹೆಸರುಃ | ಶಂಭುಲಿಂಗ | ಪ್ರಾಸಾಃ 01 |
| ತಂದೆ/ಗಂಡನ ಹೆಸರುಃ | ಧರ್ಮಣ್ಣ | ಚಾಸಾಃ 01 |
| ವಯಸ್ಸುಃ | 32 ವರ್ಷ | ದಿಃ 15-12-2023 |
| ಉದ್ಯೋಗಃ | ಪ್ರಭಾರಿ ಶಾಖಾಧಿಕಾರಿ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ವನದುರ್ಗ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನಾನು ದಿಃ 28.8.2020 ರಿಂದ ಸಪ್ಟೆಂಬರ 2020 ರವರೆಗೆ ಜೆಸ್ಕಾಂ ವನದುರ್ಗದಲ್ಲಿ ಪ್ರಭಾರಿ ಶಾಖಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 28.3.2020 ರಂದು ಬೆಃ 10.30 ಗಂಟೆಗೆ 1 ನೇ ಆರೋಪಿಯು ತನ್ನ ಹೊಲ ಸರ್ವೆ ನಂ. 105/2 ರಲ್ಲಿ ರೈತರ ನೀರಾವರಿ ಪೈಪಸ್ಸೆಟಗೆ ವಿದ್ಯುತ ಸರಬರಾಜು ಮಾಡುವ ವಿದ್ಯುತ ಸಿಮೆಂಟ ಕಂಬವನ್ನು ಹಾಕಿದಾಗ 1 ನೇ ಆರೋಪಿಯು ತನ್ನ ಟ್ರಾಕ್ಟರ ನಂ. ಕೆಎ-33-ಟಿಎ-9848 ರಿಂದ ವಿದ್ಯುತ ಕಂಬಕ್ಕೆ ಹಾನಿ ಮಾಡುವ ಉದ್ದೇಶದಿಂದ 2 ಮತ್ತು 3 ನೇ ಆರೋಪಿತರೊಂದಿಗೆ ಕೂಡಿಕೊಂಡು ಡಿಕ್ಕಿ ಪಡಿಸಿ ಹಾನಿ ಗೊಳಿಸಿರುತ್ತಾನೆ. ಸದರಿ ಘಟನೆಯ ಕುರಿತು ಚಾಸಾ 6 ರಿಂದ 8 ರವರು ನನಗೆ ಮಾಹಿತಿಯನ್ನು ನೀಡಿರುತ್ತಾರೆ. ನಾನು ಸದರಿ ಘಟನೆಯ ಕುರಿತು ಚಾಸಾ 10 ರವರಿಗೆ ತಿಳಿಸಿರುತ್ತೇನೆ. ನಂತರ ಆರೋಪಿತರಿಗೆ ತಿಳಿ ಹೇಳಿ ಇನ್ನೊಂದು ವಿದ್ಯುತ ಕಂಬವನ್ನು ಸದರಿ ಘಟನಾ ಸ್ಥಳದಲ್ಲಿ ರೈತರಿಗೆ ವಿದ್ಯುತ ಸರಬರಾಜು ಮಾಡಲು ತೊಂದರೆ ಆಗದ ಹಾಗೆ ಹೊಸ ಕಂಬವನ್ನು ಹಾಕಿರುತ್ತೇವೆ. ನಾನು ಮತ್ತು ಚಾಸಾ 6 ರಿಂದ 10 ರವರು ಕೂಡಿ ಹೊಸ ಕಂಬವನ್ನು ಹಾಕಿ ಬಂದಿರುತ್ತೇವೆ. ಆದಾಗಿಯೂ 1 ನೇ ಆರೋಪಿತನೊಂದಿಗೆ ಕೂಡಿ 2 ಮತ್ತು 3 ನೇ ಆರೋಪಿತರು ದಿಃ 11.4.2020 ರಂದು ಹೊಸ ಕಂಬವನ್ನು ಹಾಕಲು ಹೊದಾಗ ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸಿರುತ್ತಾರೆ. ನಂತರ ನಾವು ಕಂಬವನ್ನು ಹಾಕಿದಾಗ 1 ನೇ ಆರೋಪಿತನು ಮತ್ತೆ ಟ್ರಾಕ್ಟರನಿಂದ ಕಂಬಕ್ಕೆ ಡಿಕ್ಕಿ ಪಡಿಸಿ ನಾವು ಹಾಕಿರುವ ಇನ್ನೊಂದು ಕಂಬವನ್ನು ಮುರಿದು ಹಾಕಿರುತ್ತಾರೆ. ಸದರಿ ಆರೋಪಿತರು ಕೂಡಿಕೊಂಡು ನಮ್ಮ ಇಲಾಖೆಯ ಕಂಬವನ್ನು ಮುರಿದಿದ್ದರಿಂದ ನಮ್ಮ ಇಲಾಖೆ ಅಂದಾಜು 20,000/- ರೂ. ಹಾನಿ ಆಗಿರುತ್ತದೆ. ನಂತರ ನಾನು ಘಟನೆಯ ಕುರಿತು ನಮ್ಮ ಮೇಲಾಧಿಕಾರಿಗಳಿಗೆ ಮಾಹಿತಿಯನ್ನು ನೀಡಿರುತ್ತೇನೆ. ನಂತರ ನಾನು ಸದರಿ ಘಟನೆಯ ಕುರಿತು ಆರೋಪಿತರ ವಿರುದ್ದ ಕ್ರಮ ಕೈಗೊಳ್ಳಲು ಪೋಲಿಸ ಠಾಣೆಗೆ ಹೊಗಿ ದೂರನ್ನು ಮತ್ತು ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಗೆ ಫಿರ್ಯಾದಿಯನ್ನು

ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-1 ಎಂದು, ಹಾನಿಗೆ ಒಳಗಾದ ವಿದ್ಯುತ ಕಂಬದ ಭಾವಚಿತ್ರ ನಿಪಿ-2 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು 1 ಮತ್ತು 2 ನೇ ಆರೋಪಿತರ ಪರಃ ಶ್ರೀ ವಾಯ್.ಎಸ್. ವಕೀಲರವರಿಂದಃ</u>**

ನಾನು ವನದುರ್ಗದಲ್ಲಿ ಜೆಸ್ಕಾಂ ಮಿಟರ್ ರೈಟರ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ವನದುರ್ಗದಿಂದ ಕರಕಳ್ಳಿಗೆ ಗೋಗಿ ಮುಖಾಂತರವಾಗಿ ಹೊಗಲಾಗುತ್ತದೆ. ದಿಃ 28.3.2020 ರಂದು ಘಟನಾ ಸ್ಥಳಕ್ಕೆ ನಾನು ಮತ್ತು ಚಾಸಾ 9 ರವರು ಹೊಗಿರುತ್ತೇವೆ. ನಾನು ದೂರಿನಲ್ಲಿ ಕಂಬವನ್ನು ಮುರಿದ ಮೇಲೆ ಘಟನಾ ಸ್ಥಳಕ್ಕೆ ಹೊಗಿ ಕಂಬವನ್ನು ನೋಡಿಕೊಂಡು ಬರುವದರ ಬಗ್ಗೆ ಬರೆದಿರುವುದಿಲ್ಲ. ನಾವು ಘಟನಾ ಸ್ಥಳಕ್ಕೆ 4.00 ಗಂಟೆಗೆ ಬಿಟ್ಟಿರುತ್ತೇವೆ. ನಾವು ಕಂಬವನ್ನು ಹೊಗುವಾಗ ತೆಗೆದುಕೊಂಡು ಹೊಗಿರುತ್ತೇವೆ. ನಾವು ಘಟನಾ ಸ್ಥಳಕ್ಕೆ ಕಾರಿನಲ್ಲಿ ಹೊಗಿರುತ್ತೇವೆ. ಅದರ ನಂ. ಕೆಎ-36-ಎನ್-4809 ಇರುತ್ತದೆ. ನಾನು ಸದರಿ ಕಾರಿನ ಬಗ್ಗೆ ದೂರಿನಲ್ಲಿ ತಿಳಿಸಿರುವುದಿಲ್ಲ. ನಾವು ವಿದ್ಯುತ ಕಂಬವನ್ನು ಗೋಗಿಯಿಂದ ತೆಗೆದುಕೊಂಡು ಹೊಗಿರುತ್ತೇವೆ. ಕಂಬವನ್ನು ತೆಗೆದುಕೊಂಡ ಹೊದ ಟ್ರಾಕ್ಟರ ನಂಬರ ಗೊತ್ತಿರುವುದಿಲ್ಲ. ಆರೋಪಿತರು ಕಂಬವನ್ನು ಹಾಕಲು ಹೊದಾಗ ಮುರಿದಿರುತ್ತಾರೆ. ನನಗೆ ಸರ್ವೆ ನಂ. 105/2 ರ ಬಗ್ಗೆ ಮಾಹಿತಿ ಇರುವುದಿಲ್ಲ. ಘಟನಾ ಸ್ಥಳದ ಚಕಬಂದಿ ಉತ್ತರಕ್ಕೆ ಮುತ್ತುಗೌಡ ಕೊಳ್ಳುರ ಎನ್ನುವರ ಜಮೀನು, ಪೂರ್ವಕ್ಕೆ ಅಮಲ್ಲಪ್ಪ ಪುಜಾರಿ ರವರ ಜಮೀನು, ದಕ್ಷಿಣಕ್ಕೆ ಮಲ್ಲಣ್ಣಗೌಡ ಎನ್ನುವರ ಜಮೀನು, ಪಶ್ಚಿಮಕ್ಕೆ ಮಾನಪ್ಪ ಎನ್ನುವರ ಜಮೀನು ಇರುತ್ತದೆ. ನಾವು ಕಂಬವನ್ನು ಹಾಕಲು ಗುಂಡಿಯನ್ನು ಮೊದಲೆ ತೊಡಿದ್ದೆವು. ಗುಂಡಿಯನ್ನು ತೆಗೆದವರ ಹೆಸರು ನನಗೆ ಗೊತ್ತಿರುವುದಿಲ್ಲ. ಕೆಎ-33-ಟಿಎ-9848 ಟ್ರಾಕ್ಟರ 1 ನೇ ಆರೋಪಿತನ ಹೆಸರಿನಲ್ಲಿ ಇರುತ್ತದೆ. ವಿದ್ಯುತ ಕಂಬವನ್ನು ಮುರಿಯಲು ಟ್ರಾಕ್ಟರ ಯಾವ ದಿಕ್ಕಿನಿಂದ ಬಂದಿರುತ್ತದೆ ನನಗೆ ಗೊತ್ತಿರುವುದಿಲ್ಲ. ನಾವು ಹೊದಾಗ ಅಕ್ಕಪಕ್ಕದ ಹೊಲದವರು ಯಾರು ಇರಲಿಲ್ಲ. ಘಟನೆ ನಡೆದಾಗ ನಾನು, ಚಾಸಾ 6 ರಿಂದ 10 ರವರು ಇದ್ದೇವು. ನಮ್ಮನ್ನು ಹೊರತು ಪಡಿಸಿ ಅಕ್ಕಪಕ್ಕದ ಜಮೀನಿನವರು ಯಾರು ಇರಲಿಲ್ಲ. ನಮ್ಮ ಕರ್ತವ್ಯಕ್ಕೆ 3 ಜನ ಆರೋಪಿತರು ಅಡ್ಡಿ ಪಡಿಸಿರುತ್ತಾರೆ. ನಾವು ಘಟನಾ ಸ್ಥಳದಿಂದ ಗೋಗಿಗೆ ಬಂದಿರುತ್ತೇವೆ. ಗೋಗಿ ಕೆಇಬಿ ಯಿಂದ ಗೋಗಿ ಪೋಲಿಸ ಠಾಣೆ 500 ಮಿ. ದೂರ ಇರುತ್ತದೆ ಎಂದರೆ ಸರಿ.

ನಾನು ಫಿರ್ಯಾದಿ ಕೊಡಲು ಒಂದು ಸಲ ಪೋಲಿಸ ಠಾಣೆಗೆ ಹೊಗಿರುತ್ತೇನೆ. ನಾನು ಮತ್ತು ಚಾಸಾ 11 ರವರು ದೂರು ನೀಡಲು ಹೊಗಿರುತ್ತೇವೆ. ಸಮಯ ಮಃ 1.30 ಗಂಟೆ ಆಗಿತ್ತು. ಅರ್ಜಿಯನ್ನು ಚಾಸಾ 11 ರವರು ಬರೆದಿರುತ್ತಾರೆ. ವಿದ್ಯುತ ಕಂಬಗಳು ನಮ್ಮ ಇಲಾಖೆಯ ಕಂಬಗಳು ಆಗಿರುತ್ತವೆ. ನನಗೆ ಘಟನಾ ಸ್ಥಳದಲ್ಲಿ ಪೋಟೋ ತೆಗೆದವರ ಬಗ್ಗೆ ಮಾಹಿತಿ ಇರುವುದಿಲ್ಲ. ಮೊದಲನೆ

ಕಂಬವು ನೆಲದ ಮೇಲೆ ನಿಂತ್ತಿತ್ತು, 2 ನೇ ಕಂಬವು ನೆಲದ ಮೇಲೆ ಬಿದ್ದಿತ್ತು. ಕಂಬವನ್ನು ಟ್ರಾಕ್ಟರನ ಮುಂದಿನ ಭಾಗದಿಂದ ಗುದ್ದಿ ಮುರಿದಿರುತ್ತಾರೆ. ಆರೋಪಿತರು ಯಾವುದೇ ವಿದ್ಯುತ ಕಂಬವನ್ನು ಮುರಿದಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 11.4.2020 ರಂದು ಆರೋಪಿತರು 2 ನೇ ಕಂಬವನ್ನು ಹಾಕುವಾಗ ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸಿ ವಿದ್ಯುತ ಕಂಬವನ್ನು ಮುರಿದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಆಗದವರ ಮಾತನ್ನು ಕೇಳಿ ನಾವು ಆರೋಪಿತರ ವಿರುದ್ದ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರಿಗೆ ಮತ್ತು ಘಟನೆಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 11.4.2020 ರಂದು ಗೋಗಿಗೆ ಮರಳಿ ಬಂದಾಗ ಸಾಃ 6.30 ಗಂಟೆ ಆಗಿತ್ತು.

<u>ಪಾಟೀ ಸವಾಲು 3 ನೇ ಆರೋಪಿತನ ಪರಃ ಶ್ರೀ ವಿ.ಆರ್.ಡಿ. ವಕೀಲರವರಿಂದಃ</u>

ಆರೋಪಿತರು ಮುರಿದ ವಿದ್ಯುತ ಕಂಬದ ನಂಬರನ್ನು ನಾನು ದೂರಿನಲ್ಲಿ ಬರೆದಿರುವುದಿಲ್ಲ. ದಿಃ 11.4.2020 ರಂದು ಮುರಿದ ಕಂಬದ ನಂಬರನ್ನು ಕೂಡ ಬರೆಸಿರುವುದಿಲ್ಲ. ಒಂದು ಎರಡು ಕಂಬದ ಅವಶ್ಯಕತೆ ಇರುವಾಗ ನಮ್ಮ ಇಲಾಖೆಯಿಂದ ಯಾವುದೇ ಇಸ್ಟಿಮೇಟ ಮಾಡುವುದಿಲ್ಲ. ನಾವು ಆರೋಪಿತರ ಕಂಬ ಮುರಿದಿರುವ ಬಗ್ಗೆ ನಮ್ಮ ಮೇಲಾಧಿಕಾರಿಗಳಿಗೆ ಲಿಖಿತವಾಗಿ ಯಾವುದೇ ದೂರನ್ನು ನೀಡಿರುವುದಿಲ್ಲ ಆದರೆ ಮೌಖಿಕವಾಗಿ ಮಾಹಿತಿ ನೀಡಿರುತ್ತೇವೆ. ಘಟನೆ ನಡೆದಾಗ ಚಾಸಾ 10 ರವರು ಗೈರು ಹಾಜರಾಗಿರುವದರಿಂದ ನಾನು ಆ ದಿವಸ ವನದುರ್ಗ ಕೆಇಬಿ ನ ಪ್ರಭಾರಿ ಶಾಖಾಧಿಕಾರಿ ಆಗಿದ್ದೆ. ದಿಃ 11.4.2020 ರಂದು ಚಾಸಾ 10 ರವರು ವನದುರ್ಗ ಕೆಇಬಿ ಯ ಶಾಖಾಧಿಕಾರಿ ಆಗಿದ್ದರು. ಚಾಸಾ 10 ರವರು ವೈಯಕ್ತಿಕ ಕೆಲಸದ ನಿಮಿತ್ಯ ಬೇರೆಕಡೆ ಹೊದಾಗ ನಾನು ಪೋಲಿಸ ಠಾಣೆಗೆ ಹೊಗಿ ದೂರನ್ನು ನೀಡಿರುತ್ತೇನೆ. ನಾವು ವಿದ್ಯುತ ಕಂಬವನ್ನು ಮುರಿದು ಆರೋಪಿತರೇ ಮುರಿದಿರುತ್ತಾರೆ ಎಂದು ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು**
**ಶಾಹಾಪೂರ**